ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/23/ರಾಗಾಸಾ/2023-24/ವಿ.ವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:02.09.2023.

## ಸುತ್ತೋಲೆ

ವಿಷಯ: ರಾಜೀವ ಗಾಂಧಿ ಸಾಲ ರೂಪದ ವಿದ್ಯಾರ್ಥಿವೇತನ ಯೋಜನೆಗೆ ಸಂಬಂದಿಸಿದಂತೆ ಮಾಹಿತಿಯನ್ನು ಕಾಲೇಜಿನಲ್ಲಿ ಅರಿವು ಪಡಿಸುವ ಬಗ್ಗೆ,

ಉಲ್ಲೇಖ: 1) 2013-14 ನೇ ಸಾಲಿನ ಅಯವ್ಯಯ ಭಾಷಣದ ಕಂಡಿಕೆ 188, ಮತ್ತು ದಿ:05.02.2024ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 128 ಮಾಹಿತಿ 2013.
2) ಸರ್ಕಾರದ ಅದೇಶ ಸಂಖ್ಯೆ: ಇಡಿ 46 ಹೆಚ್‌ಪಿಸಿ 2017 ಬೆಂಗಳೂರು, ದಿ:02.0.2018.

***

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ 1ರಲ್ಲಿನ ಸರ್ಕಾರದ ಅಯವ್ಯಯ ಭಾಷಣದ ಕಂಡಿಕೆ ಹಾಗೂ ಆದೇಶದನ್ವಯ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಹಾಗೂ ವಾರ್ಷಿಕ ವರಮಾನ ರೂ.4.00 ಲಕ್ಷ ರೂಗಳಿಗೆ ಕಡಿಮೆ ವರಮಾನ ಇರುವ ಬಡ ವಿದ್ಯಾರ್ಥಿಗಳನ್ನು ಉನ್ನತ ವ್ಯಾಸಂಗಕ್ಕಾಗಿ ಪ್ರೋತ್ಸಾಹಿಸಲು, ಅವರ ಅಧ್ಯಯನಕ್ಕೆ ಬೇಕಾದ ಪುಸ್ತಕ, ವಸ್ತ್ರ, ಉಪಕರಣ ಮುಂತಾದವುಗಳ ವೆಚ್ಚ ಭರಿಸುವ ಸಲುವಾಗಿ ಯಾವುದಾದರೂ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಪಡೆಯುವವರಿಗೆ ಇಲಾಖೆಯಿಂದ ರಾಜೀವ ಗಾಂಧಿ ಸಾಲರೂಪದ ಸಬ್ಸಿಡಿ ನೀಡಿಕೆ ಹೆಸರಿನಲ್ಲಿ ಶೈಕ್ಷಣಿಕ ಅವಧಿಗೆ ಬಡ್ಡಿ ಸಬ್ಸಿಡಿಯನ್ನು ಇಲಾಖೆಯಿಂದ ಬ್ಯಾಂಕುಗಳಿಗೆ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.

ಇಲಾಖಾ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಅನುದಾನಿತ ಕೋರ್ಸ್‌ಗಳಲ್ಲಿ 2023-24 ನೇ ಸಾಲಿಗೆ ಪ್ರವೇಶ ಪಡೆದ/ಪಡೆಯುವ ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನ ಪಡೆಯಬಹುದಾಗಿರುತ್ತದೆ.

ಅದರಂತೆ 2023-24 ನೇ ಸಾಲಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದ/ಪಡೆಯುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅರಿವು/ತಿಳುವಳಿಕೆ ನೀಡುವ ನಿಟ್ಟಿನಲ್ಲಿ ರಾಜೀವ ಗಾಂಧಿ ಸಾಲ ರೂಪದ ವಿದ್ಯಾರ್ಥಿವೇತನ ಯೋಜನೆಯ ಬಗ್ಗೆ ಮಾಹಿತಿಯನ್ನು ಕಾಲೇಜಿನ ಮುಖ್ಯ ದ್ವಾರದ ಬಳಿ, ಕಾಲೇಜಿನ ಅವರಣದಲ್ಲಿ ಬ್ಯಾನರ್‌ಗಳನ್ನು ಅಳವಡಿಸುವುದು ಮತ್ತು ಸೂಚನಾ ಫಲಕದಲ್ಲಿ ಈ ಯೋಜನೆಯ ಬಗ್ಗೆ ಸವಿವರವಾಗಿ ಪ್ರಕಟಿಸುವಂತೆ ಸೂಚಿಸಲಾಗಿದೆ. ಹಾಗೂ ಕಾಲೇಜಿನ ಪ್ರಾಂಶುಪಾಲರು ಮತ್ತು ನೋಡೆಲ್ ಅಧಿಕಾರಿಗಳು ಸ್ಥಳೀಯ ಬ್ಯಾಂಕ್ಗಳ ಅಧಿಕಾರಿಗಳನ್ನು ಕಾಲೇಜಿಗೆ ಕರೆಸಿ ಕಾಲೇಜಿಗೆ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ರಾಜೀವ ಗಾಂಧಿ ಸಾಲ ರೂಪದ ವಿದ್ಯಾರ್ಥಿವೇತನ ಯೋಜನೆಯ ಮಾಹಿತಿ ನೀಡುವುದು. ಹಾಗೂ ಸಾಲ ಪಡೆಯ ಬಯಸುವ ವಿದ್ಯಾರ್ಥಿಗಳಿಂದ ಬ್ಯಾಂಕ್‌ನವರು ನೀಡುವ ಅರ್ಜಿಗಳನ್ನು ಭರ್ತಿಮಾಡಿಸಿ ಬ್ಯಾಂಕ್‌ಗೆ ಸಲ್ಲಿಸುವುದು. ಮತ್ತು ಬ್ಯಾಂಕ್ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಒಂದಿದ್ದು ವಿದ್ಯಾರ್ಥಿಗಳಿಗೆ ಸಾಲ ದೊರಕಿಸಲು ಮಾರ್ಗದರ್ಶನ ನೀಡಲು ಸೂಚಿಸಲಾಗಿದೆ.

(ಸುತ್ತೋಲೆಯ ಕರಡು ಪತ್ರ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ,

1) ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪದವಿ/ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು-ವೆಬ್ ಸೈಟ್ ಮೂಲಕ.

ಪ್ರತಿ:-

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ- ಸದರಿ ಯೋಜನೆ ಬಗ್ಗೆ ಪ್ರಾಂಶುಪಾಲರುಗಳಿಗೆ ಹಾಗೂ ನೋಡೆಲ್ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು.
2) ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
3) ಕಛೇರಿ ಪ್ರತಿ.

(1) (126)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉನ್ನತ ಶಿಕ್ಷಣದಲ್ಲಿರುವ ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ಶ್ರೀ ರಾಜೀವ್ ಗಾಂಧಿ ಸಾಲ ವಿದ್ಯಾರ್ಥಿವೇತನ ಯೋಜನೆ.

ಓದಲಾಗಿದೆ:- 1. 2013-14ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 188.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂ: ಕಾಶಿಇ/18/ರಾ.ಗಾ.ಸಾ.ವಿ.ವೇ./2013-14, ದಿ: 18-01-2014.

***

ಪ್ರಸ್ತಾವನೆ:-

1. ಯಾವುದೇ ವ್ಯಕ್ತಿ ಆರ್ಥಿಕ ದುರ್ಬಲತೆಯ ಕಾರಣಕ್ಕಾಗಿ ಉನ್ನತ ಶಿಕ್ಷಣದ ಸೌಲಭ್ಯದಿಂದ ವಂಚಿತನಾಗಬಾರದೆಂಬುದೇ ರಾಜ್ಯ ಸರ್ಕಾರದ ಪ್ರಮುಖ ಕಾಳಜಿಯಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವು ಪ್ರತಿಯೊಬ್ಬ ಪ್ರಜೆಗೆ ಮೂಲ ಸಾಕ್ಷರತೆಯನ್ನು ಒದಗಿಸುತ್ತಿದ್ದು, ಅಂತಹ ಸಾಕ್ಷರ ಪ್ರಜೆಯನ್ನು ರಾಷ್ಟ್ರದ ಆರ್ಥಿಕತೆಗೆ ಕೊಡುಗೆ ನೀಡುವ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಭಾಗವಹಿಸುವ ಮಾನವ ಬಂಡವಾಳವಾಗಿ ಮತ್ತು ಉತ್ಪಾದಕ ಕಾರ್ಯಪಡೆಯನ್ನಾಗಿ ಪರಿವರ್ತಿಸುವ ಕಾರ್ಯವನ್ನು ಉನ್ನತ ಶಿಕ್ಷಣವು ಮಾಡುತ್ತಿದೆ. ಭಾರತವು ಒಂದು ಯುವ ರಾಷ್ಟ್ರವಾಗಿದ್ದು ಅಗಾಧ ಜನಸಂಖ್ಯೆಯು 29 ವಯೋಮಾನಕ್ಕಿಂತ ಕಡಿಮೆಯಿರುವ ನಿಮಿತ್ತ ಎಲ್ಲಾ ಯುವಕರಿಗೂ ಉನ್ನತ ಶಿಕ್ಷಣ ಒದಗಿಸಿ, ಅತಿ ಹೆಚ್ಚಿನ ಜ್ಞಾನಸಂಪನ್ನರನ್ನಾಗಿಸಿ, ಕೌಶಲ್ಯಮತಿಗಳನ್ನಾಗಿಸಿ, ಜಾಗತಿಕ ಸೇವಾ ವಲಯವನ್ನು ವಶಪಡಿಸಿಕೊಳ್ಳುವಂತಹ ಉತ್ಪಾದನಾಕಾರಿ ಕಾರ್ಯಪಡೆಯನ್ನಾಗಿ ರೂಪಿಸುವ ಅವಶ್ಯಕತೆ ಇರುವುದನು ಸರ್ಕಾರ ಮನಗಂಡಿದೆ.

2. 2010-11 ರಲ್ಲಿ ರಾಜ್ಯದ ಉನ್ನತ ಶಿಕ್ಷಣದಲ್ಲಿನ ಒಟ್ಟಾರೆ ಪ್ರವೇಶಾತಿ ಪ್ರಮಾಣ (ಜಿಇಆರ್) ಶೇಕಡಾ 25.5%ರಷ್ಟಿದ್ದು, 13 ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಇದನ್ನು ಶೇಕಡಾ 32%ಕ್ಕೆ ಹೆಚ್ಚಿಸುವ ಗುರಿ ಹಮ್ಮಿಕೊಳ್ಳಲಾಗಿದೆ. ಪ್ರವೇಶಾತಿ ಪ್ರಮಾಣ (ಜಿಇಆರ್) ಹೆಚ್ಚಿಸುವ ದಿಶೆಯಲ್ಲಿ ಎದುರಿಸಬೇಕಾದ ಪ್ರಮುಖ ಅಡಚಣೆಯೆಂದರೆ ಸಮಾಜದಲ್ಲಿನ ಬಹುತೇಕ ವರ್ಗದವರ ಬಡತನ ಮತ್ತು ಹಿಂದುಳಿದಿರುವಿಕೆಯಿಂದಾಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಲ್ಲಿ ಪ್ರವೇಶವನ್ನೇ ಪಡೆಯಲಾರದೆ, ಇಲ್ಲವೇ ಪ್ರವೇಶ ಪಡೆದ ನಂತರ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೇ ಶಿಕ್ಷಣವನ್ನು ಮಧ್ಯದಲ್ಲೇ ಬಿಟ್ಟುಬಿಡುತ್ತಾರೆ. ಜನಸಾಂಖ್ಯಿಕತೆಯ ಲಾಭಾಂಶವನ್ನು (demographic dividends) ಪಡೆಯಬೇಕಾದರೆ ಹಿಂದುಳಿದ ವರ್ಗದವರನ್ನು ಮತ್ತು ಆರ್ಥಿಕವಾಗಿ ದುರ್ಬಲವಾಗಿರುವವರನ್ನು ಉನ್ನತ ಶಿಕ್ಷಣದ ಮುಖ್ಯವಾಹಿನಿಯಲ್ಲಿ ತ್ವರಿತವಾಗಿ ವಿಲೀನಗೊಳಿಸಲೇಬೇಕಾದ ಅಗತ್ಯತೆ ಇರುವುದನ್ನು ಸಹ ಸರ್ಕಾರ ಮನಗಂಡಿದೆ.

3. ಮೇಲ್ಕಂಡ ಅಂಶಗಳನ್ನು ಅರಿತು, ಮೇಲೆ 1ರಲ್ಲಿ ಓದಲಾದ ಆಯವ್ಯಯ ಭಾಷಣದಲ್ಲಿ "ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಹಾಗೂ ವಾರ್ಷಿಕ ವರಮಾನ 2.5 ಲಕ್ಷ ರೂ.ಗಳಿಗೂ ಕಡಿಮೆ ಇರುವ ಬಡ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಪ್ರೋತ್ಸಾಹಿಸಲು ಅವರ ಅಧ್ಯಯನಕ್ಕೆ ಬೇಕಾದ ಪುಸ್ತಕ, ವಸ್ತ್ರ, ಉಪಕರಣಗಳು, ಮುಂತಾದವುಗಳ ವೆಚ್ಚವನ್ನು ಭರಿಸಲು ಬ್ಯಾಂಕಿನಿಂದ ಸಾಲ ಪಡೆದಿರುವವರಿಗೆ ರಾಜೀವ ಗಾಂಧಿ ಶಿಷ್ಯವೇತನವನ್ನು ಜಾರಿಗೆ ತರಲಾಗುವುದು" ಎಂದು ಘೋಷಿಸಲಾಗಿದೆ.

4. ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರು, ಸವಿವರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಶ್ರೀ ರಾಜೀವ್ ಗಾಂಧಿ ಸಾಲ ವಿದ್ಯಾರ್ಥಿವೇತನ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳನ್ನು ನೀಡುವಂತೆ ಕೋರಿದ್ದಾರೆ.

5. ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಇಡಿ : 128 ಮಾಹಿತಿ 2014, ಬೆಂಗಳೂರು ದಿನಾಂಕ :05-02-2014</u>

6. ಮೇಲಿನ ಪ್ರಸ್ತಾವನೆಯಲ್ಲಿ ಕೋರಿರುವ ಅಂಶಗಳ ಆಧಾರ ಶ್ರೀ ರಾಜೀವ್ ಗಾಂಧಿ ಸಾಲ ರೂಪದ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು 2013-14ನೆ ಸಾಲಿನಿಂದ ಅನುಬಂಧದಲ್ಲಿ ವಿವರಿಸಿರುವ ಯೋಜನೆಯ ಮಾರ್ಗಸೂಚಿಗಳನ್ವಯ ರಾಜ್ಯ ಸರ್ಕಾರ ನಡೆಸುತ್ತಿರುವ ವಿಶ್ವವಿದ್ಯಾಲಯ, ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿನ (ಅನುದಾನಿತ ಕೋರ್ಸುಗಳಿಗೆ ಮಾತ್ರ) ಎಲ್ಲಾ ಸಾಮಾನ್ಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ಮತ್ತು ಅಧಿಕಾರ ನೀಡಲಾಗಿದೆ.

ಈ ಯೋಜನೆಗಾಗಿ 2013-14ನೇ ಸಾಲಿನಲ್ಲಿ ರೂ.5.00 ಕೋಟಿಗಳನ್ನು ಒದಗಿಸಲಾಗುತ್ತಿದ್ದು, ಆಡಳಿತಾತ್ಮಕ ವೆಚ್ಚ ಭರಿಸಲು ಹಾಗೂ ಇತರೆ ಅಂಶಗಳಿಗೆ ಬೇಕಾಗಿರುವ ಆಯವ್ಯಯ ಬೇಡಿಕೆಯ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದೆ.

7. ಈ ಆದೇಶವನ್ನು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಾವಳಿ 1977 ರ ನಿಯಮದ ಪರಂತುಕದ ವ್ಯಾಪ್ತಿಗೆ ಬರುತ್ತಿದ್ದು ಅದರನ್ವಯ ಹಾಗೂ ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ751 ವೆಚ್ಚ-8/2013 ದಿ: 10.10.2013ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

ಇವರಿಗೆ,

1. ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
2. ಮಹಾಲೇಖಪಾಲಕರು, ಕರ್ನಾಟಕ (ಆಡಿಟ್ 1 & 2) ಬೆಂಗಳೂರು.
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು,
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್‌ರಸ್ತೆ, ಬೆಂಗಳೂರು.
7. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಜಂಟಿ ಕಾರ್ಯದರ್ಶಿಗಳು-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ), ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
12. ಕೋ. ಆರ್ಡಿನೇಟರ್, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

3

125

ಸರ್ಕಾರಿ ಆದೇಶ ಸಂಖ್ಯೆ: ಇಡಿ 128 ಮಾಹಿತಿ 2013 ದಿ:05-02-2014ಕ್ಕೆ ಅನುಬಂಧ

## ಶ್ರೀ ರಾಜೀವ್ ಗಾಂಧಿ ಸಾಲ ವಿದ್ಯಾರ್ಥಿವೇತನ ಯೋಜನೆಯ ಮಾರ್ಗಸೂಚಿಗಳು

1) ಕಾರ್ಯಕ್ರಮದ ಉದ್ದೇಶಗಳು :-

1. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ರಾಜ್ಯದಲ್ಲಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸುವುದು.
2. ಪೂರೈಸಬಹುದಾದ ಷರತ್ತು ಮತ್ತು ನಿಬಂಧನೆಗಳೊಂದಿಗೆ ಕರ್ನಾಟಕ ರಾಜ್ಯದಲ್ಲಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಭವಿಷ್ಯವನ್ನು ಉಜ್ವಲಗೊಳಿಸುವುದಕ್ಕಾಗಿ ಹಣಕಾಸಿನ ನೆರವನ್ನು ಒದಗಿಸುವುದು.
3. ಸಾಮಾನ್ಯ ಶಿಕ್ಷಣವನ್ನು ಹೊಂದಲು ಫಲಾನುಭವಿ ವಿದ್ಯಾರ್ಥಿಗಳಿಗೆ ಸಾಲ ರೂಪದ ವಿದ್ಯಾರ್ಥಿವೇತನ ದೊರಕಿಸುವುದು.
4. ಕುಟುಂಬದ ವಾರ್ಷಿಕ ಆದಾಯ ರೂ.2.5 ಲಕ್ಷ ಮಿತಿಯೊಳಗಿನ ವಿದ್ಯಾರ್ಥಿಗಳಿಗೆ ಈ ಯೋಜನೆಯನ್ನು ವಿಸ್ತರಿಸುವುದು.
5. 2013-14 ನೇ ಸಾಲಿಗೆ ಶ್ರೀ ರಾಜೀವ್ ಗಾಂಧಿ ಸಾಲ ವಿದ್ಯಾರ್ಥಿವೇತನವನ್ನು ಕನಿಷ್ಠ 50,000 ವಿದ್ಯಾರ್ಥಿಗಳಿಗೆ ಫಲಾನುಭವಿಗಳಾಗಿಸಿ ಸಂಖ್ಯೆಯನ್ನು ವಿಸ್ತರಿಸುವುದು.
6. ವಿದ್ಯಾಭ್ಯಾಸ ಪೂರೈಸಿ ಹೊರ ಹೋಗುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸ, ಫಲಿತಾಂಶ, ಸ್ಥಾನೀಕರಣ ವ್ಯವಸ್ಥೆಯನ್ನು ಕಲ್ಪಿಸುವುದು.
7. ಪ್ರತಿವರ್ಷವು ನಿಗದಿತ ಇಡಿಗಂಟನ್ನು ಈ ಕಾರ್ಯಯೋಜನೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಸಿದ್ಧಪಡಿಸುವುದು.
8. ಫಲಾನುಭವಿ ವಿದ್ಯಾರ್ಥಿಗಳ ಆಧಾರ ಸಂಖ್ಯೆಯನ್ನು ಬ್ಯಾಂಕಿನ ಖಾತೆಗೆ ಸೇರ್ಪಡೆಗೊಳಿಸಿ ಅವರು ವಿದ್ಯಾಭ್ಯಾಸ ಮುಂದುವರೆಸಿದ್ದಾರೆಯೇ ಅಥವಾ ಉದ್ಯೋಗಕ್ಕೆ ಸೇರಿದ್ದಾರೆಯೇ ಎಂಬ ಬಗ್ಗೆ ತಿಳಿದುಕೊಂಡು ಸಾಲ ವಸೂಲಾತಿಗೆ ಕ್ರಮವಹಿಸುವುದು.

2) ಅರ್ಹತೆಗಳು :-

ರಾಜೀವ್ ಗಾಂಧಿ ಸಾಲ ರೂಪದ ವಿದ್ಯಾರ್ಥಿವೇತನವನ್ನು ಪಡೆಯಲಿಚ್ಛಿಸುವ ವಿದ್ಯಾರ್ಥಿ ಹೊಂದಿರಬೇಕಾದ ಅರ್ಹತೆಗಳು:

1. ಭಾರತೀಯನಾಗಿರಬೇಕು
2. ಪಿ.ಯು.ಸಿ. ಅಥವಾ 10+2 ಕೋರ್ಸಿನಲ್ಲಿ ಕನಿಷ್ಠ ಶೇಕಡ 50 ಅಂಕ ಪಡೆದಿರಬೇಕು.
3. 10+2 ಅಥವಾ ಸಮಾನಂತರ ಕೋರ್ಸನ್ನು ಪೂರೈಸಿ ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯ ಅಥವಾ ಸರ್ಕಾರಿ ಅಥವಾ ಅನುದಾನಿತ ಕಾಲೇಜಿನಲ್ಲಿ(ಅನುದಾನಿತ ಕೋರ್ಸುಗಳಿಗೆ ಮಾತ್ರ) ಪ್ರವೇಶಾತಿಯನ್ನು ಪಡೆದಿರಬೇಕು.

3) ಕಾರ್ಯಕ್ರಮದ ಅನುಷ್ಠಾನ :-

ಈ ಯೋಜನೆಯನ್ನು ಅರ್ಹ ವಿದ್ಯಾರ್ಥಿಗಳಿಗೆ ಚಾಲಿ ಪ್ರಚಲಿತವಿರುವ ಭಾರತೀಯ ಬ್ಯಾಂಕುಗಳ ಅಸೋಸಿಯೇಶನ್ನಿನ ವಿದ್ಯಾಭ್ಯಾಸದ ಸಾಲದ ಯೋಜನೆಗನುಗುಣವಾಗಿ ಸಾಲ ಮಂಜೂರು ಮಾಡುತ್ತಿರುವ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಸಹಯೋಗದೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದು ಮತ್ತು ಕರ್ನಾಟಕ ರಾಜ್ಯ ಸರ್ಕಾರದ ವಿಶ್ವವಿದ್ಯಾಲಯ ಅಥವಾ ಸರ್ಕಾರಿ ಅಥವಾ ಅನುದಾನಿತ ಕಾಲೇಜುಗಳಲ್ಲಿ ಪ್ರವೇಶಪಡೆದಿರುವ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತಗೊಳಿಸುವುದು. ವಿದ್ಯಾಭ್ಯಾಸದ ಅವಧಿಗೆ ಪೂರ್ಣ ಬಡ್ಡಿ ಸಹಾಯಧನವನ್ನು ನೀಡುವ ಮಟ್ಟಿಗೆ ಸರ್ಕಾರದ ಪಾತ್ರ ಸೀಮಿತವಾಗಿದ್ದು, ಅದರಿಂದಾಚೆಗೆ ವಿದ್ಯಾರ್ಥಿಯು ಸಾಲದ ಅಸಲು ಮತ್ತು ಬಡ್ಡಿ ಪಾವತಿಸುವ ಕಂತುಗಳನ್ನು ಕಟ್ಟಲು ಜವಾಬ್ದಾರನಾಗಿರುತ್ತಾನೆ.

4) ಉದ್ದೇಶ :-

ಷೆಡ್ಯೂಲ್ಡ್ ಬ್ಯಾಂಕು ವಿದ್ಯಾರ್ಥಿಯ ವಿದ್ಯಾಭ್ಯಾಸದ ವೆಚ್ಚವಾದ, ಬೋಧನಾ ಶುಲ್ಕ, ಮತ್ತು ಇತರೆ ಶುಲ್ಕಗಳು, ಆಹಾರ ಮತ್ತು ವಸತಿಯ ವೆಚ್ಚ, ಪುಸ್ತಕಗಳ ವೆಚ್ಚ, ಗಣಕ ಯಂತ್ರ, ಬಿಲ್ಲು ಮತ್ತು ರಶೀತಿಯನ್ನಾಧರಿಸಿದ ಹಿಂದುರುಗಿಸಲಾಗುವ ಠೇವಣಿ, ಪ್ರಯಾಣ ವೆಚ್ಚ ಇತ್ಯಾದಿಗಳಿಗೆ ಬೇಕಾದ ಸಾಲ ಸೌಲಭ್ಯ ಒದಗಿಸುವುದು.

5) ಸಾಲದ ಒಟ್ಟು ಮೊತ್ತ:-

ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಸಿ.ಎ., ಇತರೆ ಮೂರು ವರ್ಷದ ಕೋರ್ಸುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಗರಿಷ್ಟ ರೂ.60,000/-ಗಳಂತೆ, 03 ವರ್ಷಗಳಿಗೆ ರೂ.1,80,000/-, 05 ವರ್ಷದ ಇಂಟಿಗ್ರೇಟೆಡ್ ಕೋರ್ಸುಗಳಿಗೆ, ಪ್ರತಿ ವರ್ಷ ರೂ.60,000/-ಗಳಂತೆ ರೂ.3,00,000/-, 06 ತಿಂಗಳ ಒಳಗಿನ ಕಡಿಮೆ ಅವಧಿಯ ಕೋರ್ಸುಗಳಿಗೆ, ರೂ.20,000/-ಗಳು, 06 ತಿಂಗಳಿಂದ ಒಂದು ವರ್ಷದೊಳಗಿನ ಕೋರ್ಸುಗಳಿಗೆ ರೂ.40,000/- ಒಂದು ವರ್ಷದ ಕೋರ್ಸಿಗೆ ರೂ.60,000/-ಗಳು, ಒಂದು ವರ್ಷದ ಅವಧಿಗೆ ಮೀರಿದ ಕೋರ್ಸುಗಳಿಗೆ ರೂ.1,00,000/- ನಿಗದಿಪಡಿಸುವುದು.

6) ಬ್ಯಾಂಕುಗಳು ನಿಗದಿಪಡಿಸಿರುವ ಇತ್ತೀಚಿನ ಬಡ್ಡಿಯ ಸೂಚಕ ಬಡ್ಡಿ ದರ :-

ರೂ.4,00,000/- ದವರೆಗೆ ಶೇಕಡ 12ರಷ್ಟು

ವಿದ್ಯಾರ್ಥಿನಿಯರಿಗೆ ಮೇಲಿನ ಬಡ್ಡಿದರದಲ್ಲಿ ಶೇ.1 % ಕಡಿಮೆ

7) ಮರುಪಾವತಿ :-

ಉದ್ಯೋಗ ದೊರಕಿದ 06 ತಿಂಗಳ ನಂತರ ಅಥವಾ ವಿದ್ಯಾಭ್ಯಾಸ ಮುಗಿಸಿದ ಒಂದು ವರ್ಷದ ನಂತರ ಯಾವುದು ಮೊದಲೋ ಅದರಂತೆ ಸಾಲ ಮರುಪಾವತಿ ಪ್ರಾರಂಭವಾಗುತ್ತದೆ. ಸಾಲದ ಅಸಲು ಮೊತ್ತದ ಮೇಲಿನ ಬಡ್ಡಿಯನ್ನು ಬಡ್ಡಿಮನ್ನಾ ಅವಧಿಗೆ ಸರ್ಕಾರವು ಪಾವತಿಸುತ್ತದೆ.

| | |
|---|---|
| ರೂ. 50,000/- ವರೆಗಿನ ಸಾಲ ಮರುಪಾವತಿಗೆ | 2ವರ್ಷಗಳವರೆಗೆ ಕಾಲಾವಕಾಶ |
| ರೂ. 50,000/-ದಿಂದ 1.00 ಲಕ್ಷದವರೆಗೆ | 2ರಿಂದ 5 ವರ್ಷದವರೆಗೆ ಕಾಲಾವಕಾಶ |
| ರೂ. 1 ಲಕ್ಷಕ್ಕೆ ಮೀರಿದ ಸ್ಸಲದ ಮೊತ್ತಕ್ಕೆ3ರಿಂದ | 7 ವರ್ಷದವರೆಗೆ ಕಾಲಾವಕಾಶ |

8) ಆದಾಯದ ಮಿತಿ/ಪುರಾವೆ :-

ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2.5 ಲಕ್ಷಗಳಿಗೆ ಮೀರಿರಬಾರದು ಹಾಗೂ ತಹಶೀಲ್ದಾರರು ನೀಡಿದ ಕುಟುಂಬ ವರಮಾನ ದೃಢೀಕರಣ ಪತ್ರವು ವರಮಾನದ ಮಿತಿಯನ್ನು ಸಾಬೀತುಮಾಡಲು ಅಂತಿಮ ಪುರಾವೆಯಾಗಿರುತ್ತದೆ.

9) ಬಡ್ಡಿಯ ಸಹಾಯಧನ ಪಡೆಯಲು ಅರ್ಹತೆಗಳು :-

ಪ್ರಥಮ ಪದವಿ ಅಥವಾ ಸ್ನಾತಕೋತ್ತರ ಪದವಿ ಇಲ್ಲವೇ ಡಿಪ್ಲೋಮಾ ಕೋರ್ಸಿಗೆ ಯಾವುದಾದರೊಂದಕ್ಕೆ ಒಮ್ಮೆಗೆ ಮಾತ್ರ ಅರ್ಹ ವಿದ್ಯಾರ್ಥಿಗಳಿಗೆ ಯೋಜನೆಯ ಬಡ್ಡಿ ಸಹಾಯಧನದ ಸೌಲಭ್ಯ ದೊರಕುತ್ತದೆ. ಸಂಯುಕ್ತ ಕೋರ್ಸುಗಳ ವಿದ್ಯಾರ್ಥಿಗಳಿಗೆ ಸಹ (ಪದವಿ + ಸ್ನಾತಕೋತ್ತರ ಪದವಿ) ಬಡ್ಡಿ ಸಹಾಯಧನ ಲಭ್ಯವಿರುತ್ತದೆ. ವಿದ್ಯಾರ್ಥಿಯು ಅನುತ್ತೀರ್ಣನಾಗಿದ್ದಲ್ಲಿ ಮಧ್ಯದಲ್ಲಿ ವಿದ್ಯಾಭ್ಯಾಸ ಬಿಟ್ಟವರು, ಶಿಸ್ತಿನ ಮೇಲೆ ವಜಾಗೊಂಡವರು ಬಡ್ಡಿಯ ಸಬ್ಸಿಡಿಗೆ ಅರ್ಹರಾಗುವುದಿಲ್ಲ. ಆದರೆ ವೈದ್ಯಕೀಯ ಕಾರಣದಿಂದ ವಿದ್ಯಾರ್ಥಿಯು ವಿದ್ಯಾಭ್ಯಾಸ ಬಿಟ್ಟಲ್ಲಿ ಅಂಗೀಕರಿಸಿದ ದಾಖಲೆ ಹಾಗೂ ವಿದ್ಯಾಸಂಸ್ಥೆಯ ತೃಪ್ತಿಕರ ದೃಢೀಕರಣ ಪತ್ರ ಸಲ್ಲಿಸಿದಲ್ಲಿ ಬಡ್ಡಿಯ ಸಹಾಯಧನ ನೀಡಲು ಕ್ರಮವಹಿಸುವುದು.

10) <u>ಆಧಾರ ಸಂಖ್ಯೆಯ ಜೊತೆ ಸಾಲ ಫಲಾನುಭವಿಯನ್ನು ಗುರುತಿಸುವಿಕೆ:-</u>

ಈ ಸಾಲವನ್ನು ಪಡೆದ ಫಲಾನುಭವಿ ವಿದ್ಯಾರ್ಥಿಯು ಆಧಾರ ಸಂಖ್ಯೆ ಮತ್ತು ಪ್ಯಾನ್ ಸಂಖ್ಯೆಯನ್ನು ಬ್ಯಾಂಕಿಗೆ ನೀಡುವುದು. ಪದವಿಯಲ್ಲಿ ಟ್ಯಾಗ್ ಮಾರ್ಕರ್ ಮಾಡುವುದರಿಂದ ಸಾಲ ವಸೂಲಾತಿಗೆ ಎಲೆಕ್ಟ್ರಾನಿಕ್ಸ್ ಟ್ಯಾಗ್ ಮೂಲಕ ಉದ್ಯೋಗ ದೊರೆತ ಮೇಲೆ ವಸೂಲಾತಿಗೆ ಸುಲಭವಾಗಿರುವುದು. ಎಲ್ಲೆಲ್ಲಿ ಆಧಾರ್ ಅಥವಾ ಪ್ಯಾನ್ ಸಂಖ್ಯೆ ವಿದ್ಯಾರ್ಥಿಗಳಿಗೆ ಲಭ್ಯವಿಲ್ಲವೋ, ಅಂತಹ ಸಂದರ್ಭಗಳಲ್ಲಿ ಫಲಾನುಭವಿಗಳನ್ನು ಗುರುತಿಸಿ ಪತ್ತೆಮಾಡಲು ಹಾಗೂ ಸಾಲ ಮರುಪಾವತಿಯನ್ನು ಉಸ್ತುವಾರಿ ಮಾಡಲು ಬ್ಯಾಂಕುಗಳು ತಮ್ಮದೇ ಆದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು.

11) <u>ನೋಡಲ್ ಬ್ಯಾಂಕ್:-</u>

[illegible] (ಕೆನರಾ) [illegible] ಮತ್ತು [illegible] 560001 [illegible] ಅನುಷ್ಠಾನಗೊಳಿಸುವುದು.

12) <u>ಅನ್ವಯವಾಗುವ ಶೈಕ್ಷಣಿಕ ವರ್ಷ:-</u>

ಈ ಯೋಜನೆಯು 2013-14ನೇ ಸಾಲಿನಿಂದ ಅನ್ವಯವಾಗುವಂತೆ ಜಾರಿಗೆ ಬರುತ್ತದೆ. ಶೈಕ್ಷಣಿಕ ವರ್ಷ 2013-14ರ ಪ್ರಾರಂಭದಿಂದ ಪಡೆದ ಸಾಲದ ಮೊತ್ತ ( ಸಾಲ ಮಂಜೂರಾದ ದಿನಾಂಕ ಪರಿಗಣಿಸದೆ) ಈ ಯೋಜನೆಯಡಿಯಲ್ಲಿ ಬಡ್ಡಿ ಮನ್ನಾ ಆಗಲು ಒಳಪಡುತ್ತವೆ. 2013-14ನೇ ಶೈಕ್ಷಣಿಕ ವರ್ಷಕ್ಕಿಂತ ಮುಂಚೆ ವಿತರಣೆಯಾಗಿರುವ ಸಾಲದ ಮೊತ್ತದ ಮೇಲಿನ ಬಡ್ಡಿ ಮನ್ನಾ ಈ ಯೋಜನೆಯಡಿಯಲ್ಲಿ ಪರಿಗಣಿಸಲು ಸಾಧ್ಯವಿಲ್ಲ.

13) <u>ನಿರ್ವಹಣೆ:-</u>

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತಾಲಯವು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು/ಅಂಗವಿಕಲರು ಮುಂತಾದ ವಿವಿಧ ಫಲಾನುಭವಿಗಳು ಪಡೆದ ಸಾಲಗಳು ಮತ್ತು ಸಹಾಯಧನವನ್ನು ಉಸ್ತುವಾರಿ ಮಾಡಲು ನಿರ್ವಹಣಾ ವಿಧಿವಿಧಾನವನ್ನು ರೂಪಿಸುತ್ತದೆ.

14) <u>ಬಡ್ಡಿ ಸಹಾಯಧನದ ಕ್ಲೇಮುಗಳನ್ನು ವಿತರಿಸುವ ಬಗ್ಗೆ :-</u>

ಬ್ಯಾಂಕುಗಳಿಂದ ಬರುವ ಬಡ್ಡಿ ಸಹಾಯಧನದ ಕ್ಲೇಮುಗಳನ್ನು ವಾರ್ಷಿಕ ಅಥವಾ ಅರ್ಧವಾರ್ಷಿಕದ ಆಧಾರದ ಮೇಲೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ನಿರ್ಧಾರದ ಮೇರೆಗೆ ವಿತರಿಸುವುದು.

(ಪಿ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

ಕ್ರಮ: 213

**ಕರ್ನಾಟಕ ಸರ್ಕಾರದ ನಡವಳಿಗಳು** ದಿನಾಂಕ: 05/01/18

ವಿಷಯ: ರಾಜೀವ್‌ಗಾಂಧಿ ಸಾಲ ರೂಪದ ವಿದ್ಯಾರ್ಥಿ ವೇತನದ ಫಲಾನುಭವಿಗಳ ಕುಟುಂಬದ ಆದಾಯದ ಮಿತಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: (1) 2013-14ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 188.

(2) ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಮಾಹಿತಿ 2014 ದಿ: 05.02.2014.

(3) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಕಾಶಿಇ/262/ಎಲ್.ಡಿ.ಎಂ/ಸಭೆ/ರಾಗಾಸಾ/2016-17/ವಿ.ವೇ ದಿ:13.07.2017.

*************

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆಯವ್ಯಯ ಭಾಷಣದ ಕಂಡಿಕೆ 188 ರಲ್ಲಿ "ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಹಾಗೂ ವಾರ್ಷಿಕ ವರಮಾನ 2.5 ಲಕ್ಷ ರೂ.ಗಳಿಗೂ ಕಡಿಮೆ ಇರುವ ಬಡ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಪ್ರೋತ್ಸಾಹಿಸಲು ಅವರ ಅಧ್ಯಯನಕ್ಕೆ ಬೇಕಾದ ಪುಸ್ತಕ, ವಸ್ತ್ರ, ಉಪಕರಣಗಳು ಮುಂತಾದವುಗಳ ವೆಚ್ಚವನ್ನು ಭರಿಸಲು ಬ್ಯಾಂಕಿನಿಂದ ಸಾಲ ಪಡೆದಿರುವವರಿಗೆ ರಾಜೀವ್ ಗಾಂಧಿ ಶಿಷ್ಯವೇತನವನ್ನು ಜಾರಿಗೆ ತರಲಾಗುವುದು" ಎಂದು ಘೋಷಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರ ನಡೆಸುತ್ತಿರುವ ವಿಶ್ವವಿದ್ಯಾಲಯ, ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿನ (ಅನುದಾನಿತ ಕೋರ್ಸುಗಳಿಗೆ ಮಾತ್ರ) ಎಲ್ಲಾ ಸಾಮಾನ್ಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಅನುಮತಿ ನೀಡಿ ಸರ್ಕಾರದ ಅನುಬಂಧದಲ್ಲಿ ಈ ಯೋಜನೆಯನ್ನು ಕುಟುಂಬದ ವಾರ್ಷಿಕ ಆದಾಯ ರೂ.2.5 ಲಕ್ಷ ಮಿತಿಯೊಳಗಿನ ವಿದ್ಯಾರ್ಥಿಗಳಿಗೆ ವಿಸ್ತರಿಸಲು ಆದೇಶ ಹೊರಡಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರದಲ್ಲಿ ರಾಜೀವ್‌ಗಾಂಧಿ ಸಾಲರೂಪದ ವಿದ್ಯಾರ್ಥಿವೇತನ ಯೋಜನೆಯಡಿ ವಿದ್ಯಾರ್ಥಿಗಳು ಸಾಲ ಪಡೆಯಬೇಕಾದಲ್ಲಿ ವಿದ್ಯಾರ್ಥಿಗಳ ಕುಟುಂಬದ ಆದಾಯ ರೂ.2.5 ಲಕ್ಷಕ್ಕಿಂತಲೂ ಕಡಿಮೆ ಇರಬೇಕು ಎಂಬ ಷರತ್ತು ಯೋಜನೆಯ ಪ್ರಗತಿಗೆ ಅಡ್ಡಿಯಾಗಿರುವುದರಿಂದ ಈ ಆದಾಯದ ಮಿತಿಯನ್ನು ರೂ.2.5 ಲಕ್ಷಗಳಿಂದ ರೂ.4.00 ಲಕ್ಷಗಳಿಗೆ ವಿಸ್ತರಿಸಿ ಆದೇಶದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಸಾಲ ಪಡೆಯಲು ಅನುಕೂಲವಾಗುವುದರೊಂದಿಗೆ ಆರ್ಥಿಕ ಕಾರಣಗಳಿಗಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗುವ ಯುವಕರನ್ನು ಉನ್ನತ ಶಿಕ್ಷಣ ಮುಂದುವರೆಸಲು ಪ್ರೋತ್ಸಾಹಿಸಬಹುದಾಗಿರುತ್ತದೆ. ಆದ್ದರಿಂದ ಯೋಜನೆಯ ಫಲಾನುಭವಿ ವಿದ್ಯಾರ್ಥಿಗಳ ಕುಟುಂಬದ ಆದಾಯದ ಮಿತಿಯನ್ನು ರೂ.2.5 ಲಕ್ಷಗಳಿಂದ ರೂ.4.00 ಲಕ್ಷಕ್ಕೆ ವಿಸ್ತರಿಸಲು ಸರ್ಕಾರದ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಇಡಿ 46 ಹೆಚ್‌ಪಿಸಿ 2017**
**ಬೆಂಗಳೂರು, ದಿನಾಂಕ: 02-01-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ನಡೆಸುತ್ತಿರುವ ವಿಶ್ವವಿದ್ಯಾಲಯ, ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿನ (ಅನುದಾನಿತ ಕೋರ್ಸುಗಳಿಗೆ ಮಾತ್ರ) ಎಲ್ಲಾ ಸಾಮಾನ್ಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ವಿದ್ಯಾರ್ಥಿಗಳಿಗೆ ರಾಜೀವ್‌ಗಾಂಧಿ ಸಾಲ

ರೂಪದ ವಿದ್ಯಾರ್ಥಿವೇತನ ಯೋಜನೆಯಡಿ ಸಾಲ ಪಡೆಯಲು ನಿಗದಿಪಡಿಸಲಾದ ವಿದ್ಯಾರ್ಥಿಗಳ ಕುಟುಂಬದ ಆದಾಯದ ಮಿತಿಯನ್ನು ರೂ.2.50 ಲಕ್ಷಗಳಿಂದ ರೂ.4.00 ಲಕ್ಷಗಳಿಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಮಾಹಿತಿ 2014 ದಿ: 05.02.2014ರಲ್ಲಿನ ಇತರೆ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಎಸ್.ಆರ್.ಎಸ್.ನಾಥನ್) 6/1/18
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಜನೆ)
ಉನ್ನತ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
4. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ ಅವರ ಆಪ್ತ ಕಾರ್ಯದರ್ಶಿಗಳು.
6. ಸಮನ್ವಯಾಧಿಕಾರಿಗಳು, ಮಾಹಿತಿ ಕೇಂದ್ರ, ಉನ್ನತ ಶಿಕ್ಷಣ ಇಲಾಖೆ.
7. ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/262/ಎಲ್‌ಡಿಎಂಸಭೆ/ರಾಗಾಸಾವಿವೇ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:09.01.2018.

ಮೇಲ್ಕಂಡ ಸರ್ಕಾರದ ಆದೇಶವನ್ನು ಸಂಬಂಧಪಟ್ಟವರ ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2. ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಇಲಾಖಾ ವೆಬ್‌ಸೈಟ್ ಮುಖಾಂತರ.
3. ಜನರಲ್ ಮ್ಯಾನೇಜರ್, CREDIT-RETAIL & MSME, ವಿಜಯ ಬ್ಯಾಂಕ್, ಕೇಂದ್ರ ಕಛೇರಿ, 41/2, ಎಂ.ಜಿ.ರಸ್ತೆ, ಬೆಂಗಳೂರು-560 001.
4. ಸಂಯೋಜಕರು, State Level Bankers Committee & ಜನರಲ್ ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೋರೇಟ್ ಕಛೇರಿ, ಗಾಂಧಿನಗರ, ಬೆಂಗಳೂರು-560 009.

ಪ್ರತಿಯನ್ನು:

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು – ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.
3. ಕಾಲೇಜು ಶಿಕ್ಷಣ ಆಯುಕ್ತರ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ. 4.ಕಛೇರಿ ಪ್ರತಿ.